# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577 007.

**ಕಾಲೇಜು ಅಭಿವೃದ್ಧಿ ಪರಿಷತ್**

ಸಂಖ್ಯೆ:ದಾವಿವಿ/ಸಿಡಿಸಿ/138/2024-25/2535 — ದಿನಾಂಕ:18.10.2024

Bapuji Institute of Hi-Tech Education
110
Date 21/10/24
Davangere.

## : ಕಛೇರಿ ಜ್ಞಾಪನ :

ವಿಷಯ : 2024-25ನೇ ಶೈಕ್ಷಣಿಕ ಸಾಲಿನ ಮುಂದುವರಿಕೆ ಸಂಯೋಜನೆ ನೀಡುವ ಬಗ್ಗೆ.

ಉಲ್ಲೇಖ :
1. ಕಾಲೇಜಿನ ಅರ್ಜಿ ಸಂಖ್ಯೆ: AFF/218/AF/P14GBH0090/2024-25/10183.
2. ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿ ವರದಿ ದಿನಾಂಕ:05.06.2024.
3. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:15.10.2024.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರಲ್ಲಿ ಕಾಲೇಜಿನ ಮುಂದುವರಿಕೆ ಸಂಯೋಜನೆ ಕುರಿತು ಸ್ಥಳೀಯ ತಪಾಸಣಾ ಸಮಿತಿಯು ನೀಡಿರುವ ಶಿಫಾರಸ್ಸನ್ನು ದಿನಾಂಕ:12.06.2024ರಂದು ನಡೆದ ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ದಿನಾಂಕ:13.06.2024ರಂದು ನಡೆದ ಸಿಂಡಿಕೇಟ್ ಸಭೆಗಳಲ್ಲಿ ಯಥಾವತ್ತಾಗಿ ಅನುಮೋದಿಸಲಾಗಿದೆ.

ಆದುದರಿಂದ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000, ಪ್ರಕರಣ 59(17)ರ ಮೇರೆಗೆ, ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಯು ವಿಧಿಸಿರುವ ಷರತ್ತುಗಳನ್ನು ಹಾಗೂ ಆನ್‌ಲೈನ್ ಸಂಯೋಜನೆಯ ನಿಗದಿತ ಮಾನದಂಡಗಳನ್ನು (Defined Parameters) ಕಡ್ಡಾಯವಾಗಿ ಅನುಷ್ಠಾನ/ಕಾರ್ಯಗತಗೊಳಿಸಿ, ಪೂರಕ ದಾಖಲೆಗಳೊಂದಿಗೆ ಅನುಪಾಲನಾ ವರದಿಯನ್ನು ದಿನಾಂಕ:25.10.2024ರೊಳಗಾಗಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಹಾಗೂ ಈ ಕೆಳಕಂಡ ಷರತ್ತಿಗೊಳಪಟ್ಟು, 2024-25ನೇ ಸಾಲಿನ ಅವಧಿಗೆ ಮಾತ್ರ ಈ ಈ ಕೆಳಕಂಡಂತೆ ತಾತ್ಕಾಲಿಕವಾಗಿ ಮುಂದುವರಿಕೆ ಸಂಯೋಜನೆಗೆ ಅನುಮತಿಸಲಾಗಿದೆ.

| | | |
|---|---|---|
| ಕಾಲೇಜಿನ ಹೆಸರು | : | ಬಾಪೂಜಿ ಇನ್ಸಿಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಷನ್ ಕಾಲೇಜು, ದಾವಣಗೆರೆ. |
| ಆನ್‌ಲೈನ್ ಸಂಯೋಜನಾ ಅಂಕಗಳು | : | 71.85% |

| ಪದವಿ | ಭಾಷೆಗಳು | ಸಂಯೋಜನಾ ವಿಧ | ಅನುಮೋದಿತ ಐಚ್ಛಿಕ ವಿಷಯಗಳು | ಪ್ರವೇಶ ಮಿತಿ | ವಿಭಾಗಗಳು |
|---|---|---|---|---|---|
| 1 | 2 | 3 | 4 | 5 | 6 |
| ಬಿ.ಕಾಂ. | ಕನ್ನಡ,ಇಂಗ್ಲೀಷ್, ಕನ್ನಡ(Functional), ಹಿಂದಿ, ಸಂಸ್ಕೃತ, ಉರ್ದು | RTA | ಕಡ್ಡಾಯ ವಿಷಯಗಳು | 180 | 03 |
| ಬಿ.ಸಿ.ಎ. | | | | 300 | 05 |

<u>ಷರತ್ತುಗಳು:</u>

1. ಸ್ಥಳೀಯ ವಿಚಾರಣೆ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಿ ಅನುಪಾಲನಾ ವರದಿಯನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸತಕ್ಕದ್ದು.
2. ಜಾರಿಯಲ್ಲಿರುವ ಅನ್ವಯವಾಗುವ ಸರ್ಕಾರದ/ವಿಶ್ವವಿದ್ಯಾನಿಲಯ/ಯು.ಜಿ.ಸಿ/ಎ.ಐ.ಸಿ.ಟಿ/ಎನ್.ಸಿ.ಟಿ.ಇ ನಿಯಮಾವಳಿ ಆದೇಶಗಳು ಹಾಗೂ ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
3. ಯಾವುದೇ ಕೋರ್ಸ್‌ಗೆ/ ಕೋರ್ಸ್‌ಗಳಿಗೆ ವಿಶ್ವವಿದ್ಯಾನಿಲಯದ ಪೂರ್ವಾನುಮತಿಯಿಲ್ಲದೇ ಶಾಖೆಗಳನ್ನು ಹೆಚ್ಚಿಸಬಾರದು.
4. ವಿಶ್ವವಿದ್ಯಾನಿಲಯವು ಕೋರ್ಸ್‌ಗಳಿಗೆ ನಿಗದಿಪಡಿಸಿರುವ ಶೈಕ್ಷಣಿಕ ಅರ್ಹತಾ ನಿಯಮಾವಳಿಗಳನ್ನು ಉಲ್ಲಂಘಿಸದಂತೆ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದು.
5. ಪ್ರವೇಶ ಮತ್ತು ಇತರೆ ಶುಲ್ಕಗಳನ್ನು ವಿಶ್ವವಿದ್ಯಾನಿಲಯವು ನಿಗಧಿಪಡಿಸಿದ ಧರದಲ್ಲಿ ವಿದ್ಯಾರ್ಥಿಗಳಿಂದ ಪಡೆದುಕೊಂಡು ವಿಶ್ವವಿದ್ಯಾನಿಲಯಕ್ಕೆ ನಿಗದಿತ ದಿನಾಂಕದೊಳಗೆ ಪಾವತಿಸತಕ್ಕದ್ದು.

ಪು.ತಿ.ನೋ

gh

6. ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವ ಸಲುವಾಗಿ ಕಾಲೇಜಿನಲ್ಲಿ ಶೈಕ್ಷಣಿಕ, ಬೋಧನಾ ಕ್ರಮವನ್ನು ಉತ್ತಮಪಡಿಸತಕ್ಕದ್ದು.
7. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಸೆಕ್ಷನ್ 61ರ ಮೇರೆಗೆ, ಈ ಮೇಲ್ಕಂಡಂತೆ ಕಲಂ 4ರಲ್ಲಿ ನಿಗದಿಪಡಿಸಿರುವ ಪ್ರವೇಶಮಿತಿಗಿಂತ ಹೆಚ್ಚುವರಿ ಪ್ರವೇಶಾತಿ ಮಾಡಿಕೊಳ್ಳತಕ್ಕದ್ದಲ್ಲ. ನಿಗದಿತ ವಿದ್ಯಾರ್ಥಿ ಪ್ರವೇಶ ಮಿತಿಯ ಪ್ರಮಾಣವನ್ನು ಮೀರಿದ್ದಲ್ಲಿ ಹೆಚ್ಚುವರಿ ಪ್ರವೇಶ ಪ್ರಮಾಣಕ್ಕೆ ವಿಶ್ವವಿದ್ಯಾನಿಲಯ ಅಂಗೀಕಾರ ನೀಡುವುದಿಲ್ಲ.
8. ಆನ್‌ಲೈನ್ ಸಂಯೋಜನೆಯ ನಿಗದಿತ ಮಾನದಂಡಗಳ (Defined Parameters) 08 ಅಂಶಗಳನ್ನು ಪೂರೈಸುವುದು ಹಾಗೂ ಕಾಲೇಜು/ಸಂಸ್ಥೆಯ ಹೆಸರಿನಲ್ಲಿ ಸ್ವಂತ ಜಮೀನು ಹೊಂದಿರುವುದು ಕಡ್ಡಾಯವಾಗಿರುತ್ತದೆ.
9. ಈ ಕೆಳಕಂಡ ಆನ್‌ಲೈನ್ ಸಂಯೋಜನೆಯ ನಿಗದಿತ ಮಾನದಂಡಗಳನ್ನು (Defined Parameters) ಪೂರೈಸಿರುವುದಿಲ್ಲ. ಸದರಿ ನಿಗದಿತ ಮಾನದಂಡಗಳನ್ನು ಮುಂದಿನ ಎರಡು ಶೈಕ್ಷಣಿಕ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು. ಒಂದು ವೇಳೆ ಅನುಷ್ಠಾನಗೊಳಿಸದೇ ಇದ್ದ ಪಕ್ಷದಲ್ಲಿ ಪ್ರಥಮ ವರ್ಷದ ಪದವಿಗಳಿಗೆ ಪ್ರವೇಶಾತಿಯನ್ನು ನಿಷಿದ್ಧಗೊಳಿಸಲಾಗುವುದು. ಅಂತಹ ಸಂದರ್ಭದಲ್ಲಿ ದ್ವಿತೀಯ ಮತ್ತು ತೃತೀಯ ಪದವಿ ವಿದ್ಯಾರ್ಥಿಗಳು ತಮ್ಮ ಅಂತಿಮ ಪದವಿ ತರಗತಿಗಳನ್ನು ಪೂರ್ಣಗೊಳಿಸುವವರೆಗೆ ಮಾತ್ರ ಕಾಲೇಜನ್ನು ನಡೆಸಲು ಅವಕಾಶ ನೀಡಲಾಗುವುದು. ನಂತರ ಕಾಲೇಜಿಗೆ ನೀಡಲಾಗಿರುವ ಸಂಯೋಜನೆಯನ್ನು ರದ್ದುಪಡಿಸಲಾಗುವುದು.

| Sl. No. | Parameter | Minimum Value or Quality required as per UGC / KSU Act | Value / Quality as per LIC |
|---|---|---|---|
| 2 | Class Room Area per Student, in square feet/student | 15 Square feet/student | 0, Not Complied |
| 3 | Laboratory Area per Student, in square feet/student | 10 square feet/student | 0.01, Not Complied |
| 4 | Library Area per Student, in square feet/student | 7.5 square feet/student | 0.01, Not Complied |

10. 2025-26ನೇ ಶೈಕ್ಷಣಿಕ ಸಾಲಿಗೆ ಕೋರ್ಸ್‌ಗಳ ಸಂಯೋಜನಾ ನವೀಕರಣಕ್ಕೆ ಕಾಲೇಜು ತಪ್ಪದೇ ಸಂಯೋಜನಾ ಅರ್ಜಿಯನ್ನು ಸಲ್ಲಿಸತಕ್ಕದ್ದು.
11. ಐದು ವರ್ಷಗಳನ್ನು ಪೂರೈಸಿರುವ ಕಾಲೇಜುಗಳು ನ್ಯಾಕ್(NAAC) ಅನುಮೋದನೆಯನ್ನು ಕೂಡಲೇ ಪಡೆದುಕೊಳ್ಳತಕ್ಕದ್ದು.
12. ಪ್ರಾಂಶುಪಾಲರು, ಮೌಲ್ಯಮಾಪನ ಕಾರ್ಯಕ್ಕಾಗಿ ಅರ್ಹ ಉಪನ್ಯಾಸಕರ ಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿಗಳ ಅಧ್ಯಕ್ಷರುಗಳಿಗೆ ತಪ್ಪದೇ ಸಲ್ಲಿಸತಕ್ಕದ್ದು.

ವಿ.ಸೂ:-ಕಾಲೇಜು ಯಾವುದೇ ಕಾರಣಕ್ಕೂ ವಿಶ್ವವಿದ್ಯಾನಿಲಯವು ಪ್ರವೇಶಾತಿಗೆ ನಿಗದಿಪಡಿಸಿದ ಅಂತಿಮ ದಿನಾಂಕದ ನಂತರ ಯಾವುದೇ ಪ್ರವೇಶವನ್ನು ಮಾಡಿಸಿಕೊಳ್ಳತಕ್ಕದ್ದಲ್ಲ.

ಆನ್‌ಲೈನ್ ಸಂಯೋಜನಾ ವರದಿ ಲಗತ್ತಿಸಿದೆ.

ಆದೇಶದ ಮೇರೆಗೆ,

ಕುಲಸಚಿವರು (I/c)

ಕುಲಸಚಿವರು,
ದಾವಣಗೆರೆ ವಿಶ್ವವಿದ್ಯಾನಿಲಯ,
ಶಿವಗಂಗೋತ್ರಿ, ದಾವಣಗೆರೆ-577 002.

ಗೆ,

1. ಪ್ರಾಂಶುಪಾಲರು, ಬಾಪೂಜಿ ಇನ್ಸಿಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಷನ್ ಕಾಲೇಜು, ಲೇಕ್ ವ್ಯೂ ಕ್ಯಾಂಪಸ್ ಎಸ್.ಎಸ್. ಬಡಾವಣೆ, ದಾವಣಗೆರೆ -577002
2. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577 007.

**ಕಾಲೇಜು ಅಭಿವೃದ್ಧಿ ಪರಿಷತ್**

ಸಂಖ್ಯೆ:ದಾವಿವಿ/ಸಿಡಿಸಿ/138/2024-25/8536 ದಿನಾಂಕ:18.10.2024

## :ಅಧಿಕೃತ ಜ್ಞಾಪನ:

ವಿಷಯ: **ಶ್ರೀ ಬಾಪೂಜಿ ಎಜುಕೇಷನ್ ಅಸೋಸಿಯೇಷನ್, ದಾವಣಗೆರೆ** – ಇವರು ದಾವಣಗೆರೆಯಲ್ಲಿ **ಬಾಪೂಜಿ ಇನ್ಸಿಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಷನ್ ಕಾಲೇಜು, ದಾವಣಗೆರೆ.** ಕಾಲೇಜಿನಲ್ಲಿ 2024-25ನೇ ಶೈಕ್ಷಣಿಕ ಸಾಲಿನಿಂದ ಬಿ.ಸಿ.ಎ., ಕೋರ್ಸಿನಲ್ಲಿರುವ ವಿದ್ಯಾರ್ಥಿ ಪ್ರಮಾಣವನ್ನು ಹೆಚ್ಚಿಸಿ ಅನುಮತಿ ನೀಡುವ ಬಗ್ಗೆ.

ಉಲ್ಲೇಖ:
1. ವಿಶ್ವವಿದ್ಯಾನಿಲಯದ ಪ್ರಕಟಣೆ ಸಂಖ್ಯೆ: ದಾವಿವಿ/ಸಿಡಿಸಿ/ಸಂಯೋ-138/2024-25 /252, ದಿನಾಂಕ:19.04.2024
2. ಕಾಲೇಜಿನ ಅರ್ಜಿ ಸಂಖ್ಯೆ : AFF/218/AF/P14GBH0090/2024-25/10183
3. ಸ್ಥಳೀಯ ತಪಾಸಣಾ ಸಮಿತಿ ವರದಿ ದಿನಾಂಕ:05.06.2024
4. ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ ದಿನಾಂಕ:13.06.2024
5. ಸಿಂಡಿಕೇಟ್ ಸಭೆಯ ಅನುಮೋದನೆ ದಿನಾಂಕ:12.06.2023.
6. ವಿಶ್ವವಿದ್ಯಾನಿಲಯ ಪತ್ರ ಸಂಖ್ಯೆ: ದಾವಿವಿ/ಸಿಡಿಸಿ/ಸಂಯೋ/138/2024-25/819, ದಿನಾಂಕ:18.06.2024.
7. ಸರ್ಕಾರದ ಆದೇಶ ಸಂಖ್ಯೆ: ಇಡಿ 132 ಯುಎನ್‌ಇ 2024, ದಿನಾಂಕ:03.09.2024
8. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:15.10.2024

****

ಪ್ರಸ್ತಾವನೆ:-

ವಿಶ್ವವಿದ್ಯಾನಿಲಯದ ವ್ಯಾಪಿಯ **ಶ್ರೀ ಬಾಪೂಜಿ ಎಜುಕೇಷನ್ ಅಸೋಸಿಯೇಷನ್, ದಾವಣಗೆರೆ** – ಇವರು ದಾವಣಗೆರೆಯಲ್ಲಿ **ಬಾಪೂಜಿ ಇನ್ಸಿಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಷನ್ ಕಾಲೇಜು, ದಾವಣಗೆರೆ** ಕಾಲೇಜಿನಲ್ಲಿ 2024-25ನೇ ಶೈಕ್ಷಣಿಕ ಸಾಲಿನಿಂದ ಬಿ.ಸಿ.ಎ., ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು ಹೆಚ್ಚಿಸುವಂತೆ ಕೋರಿ ಉಲ್ಲೇಖ (2)ರಲ್ಲಿ ಸಂಯೋಜನೆಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಸಂಬಂಧವಾಗಿ, ವಿಶ್ವವಿದ್ಯಾನಿಲಯದ ಸ್ಥಳೀಯ ತಪಾಸಣಾ ಸಮಿತಿಯು ದಿನಾಂಕ:10.06.2024ರಂದು ಕಾಲೇಜಿಗೆ ಭೇಟಿ ನೀಡಿ, ಭೌತಿಕ ಪರಿಶೀಲನೆ ನಡೆಸಿ ಶಿಫಾರಸ್ಸು ಮಾಡಿ ಸಲ್ಲಿಸಲಾಗಿದ್ದ ವರದಿಗಳನ್ನು ದಿನಾಂಕ:13.06.2024ರಂದು ನಡೆದ ವಿದ್ಯಾವಿಷಯಕ ಪರಿಷತ್ ಮತ್ತು ದಿನಾಂಕ:12.06.2024 ರಂದು ಸಿಂಡಿಕೇಟ್ ಸಭೆಗಳಲ್ಲಿ ಯಥಾವತ್ತಾಗಿ ಅನುಮೋದಿಸಿದಂತೆ ಉಲ್ಲೇಖ(6)ರಲ್ಲಿ UUCMS ಅನ್‌ಲೈನ್ ತಂತ್ರಾಂಶದ ಮೂಲಕ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ಉಲ್ಲೇಖ(7)ರ ಸರ್ಕಾರದ ಪತ್ರದಲ್ಲಿ, **ಶ್ರೀ ಬಾಪೂಜಿ ಎಜುಕೇಷನ್ ಅಸೋಸಿಯೇಷನ್, ದಾವಣಗೆರೆ** – ಇವರು ದಾವಣಗೆರೆಯಲ್ಲಿ **ಬಾಪೂಜಿ ಇನ್ಸಿಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಷನ್ ಕಾಲೇಜು, ದಾವಣಗೆರೆ** ಕಾಲೇಜಿನಲ್ಲಿ ಹೊಸದಾಗಿ ಬಿ.ಸಿ.ಎ., ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು ಹೆಚ್ಚಿಸಿ ಸರ್ಕಾರವು ಸಂಯೋಜನೆ ನೀಡಿರುತ್ತದೆ. ಈ ಹಿನ್ನಲೆಯಲ್ಲಿ 2024-25ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ವಿದ್ಯಾರ್ಥಿ ಪ್ರಮಾಣವನ್ನು ಹೆಚ್ಚಿಸಿ ಸಂಯೋಜನೆ ನೀಡಲು ಮಾನ್ಯ ಕುಲಪತಿಯವರು ಉಲ್ಲೇಖ (8)ರಲ್ಲಿ ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಧಿಕೃತ ಜ್ಞಾಪನ ಹೊರಡಿಸಲಾಗಿದೆ.

**ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ದಾವಿವಿ/ಸಿಡಿಸಿ/138–18/2024–25**

**ದಿನಾಂಕ:24.09.2024**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಸರ್ಕಾರದ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯಿದೆ 2000, ಸೆಕ್ಷನ್ 59(18)ರನ್ವಯ, 2024–25ನೇ ಶೈಕ್ಷಣಿಕ ಸಾಲಿನಿಂದ ಶ್ರೀ ಬಾಪೂಜಿ ಎಜುಕೇಷನ್ ಅಸೋಸಿಯೆಷನ್, ದಾವಣಗೆರೆ.– ಇವರು ದಾವಣಗೆರೆಯಲ್ಲಿ ಬಾಪೂಜಿ ಇನ್ಸಿಟಿಟ್ಯೂಟ್ ಆಫ್ ಹೈ–ಟೆಕ್ ಎಜುಕೇಷನ್ ಕಾಲೇಜು, ಈ ಕಾಲೇಜನಲ್ಲಿ ಬಿ.ಸಿ.ಎ., ಕೋರ್ಸಿನ ವಿದ್ಯಾರ್ಥಿ ಪ್ರಮಾಣವನ್ನು ಹೆಚ್ಚಿಸಿ ಈ ಕೆಳಕಂಡಂತೆ ಷರತ್ತುಗಳಿಗೊಳಪಟ್ಟು ಮಂಜೂರಾತಿ ಆದೇಶ ನೀಡಲಾಗಿದೆ.

| ಕ್ರ. ಸಂ. | ಪದವಿ | ಭಾಷೆಗಳು | ಐಚ್ಛಿಕ ವಿಷಯ ಸಮೂಹಗಳು | ಪ್ರವೇಶ ಮಿತಿ |
|---|---|---|---|---|
| 1 | ಬಿ.ಸಿ.ಎ | ಕನ್ನಡ,ಇಂಗ್ಲೀಷ್, ಕನ್ನಡ(Functional), ಹಿಂದಿ, ಸಂಸ್ಕೃತ, ಉರ್ದು | ಕಡ್ಡಾಯ ವಿಷಯಗಳು | 60 |

ಷರತ್ತುಗಳು:–

1. ಅಗ್ನಿ ಮತ್ತು ಕಟ್ಟಡ ಸುರಕ್ಷತಾ ಪ್ರಮಾಣ ಪತ್ರಗಳನ್ನು 06 ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸುವ ಷರತ್ತಿಗೊಳಪಟ್ಟು ಸಂಯೋಜನೆ ನೀಡಲಾಗಿರುತ್ತದೆ.
2. ಕಾಲೇಜುಗಳಿಗೆ ಅನ್ವಯವಾಗುವ ಅನುದಾನ ಸಂಹಿತೆಯಲ್ಲಿ ಯಾವುದೇ ಉಪಬಂಧಗಳಿದ್ದರೂ ಮೇಲ್ಕಂಡ ಕಾಲೇಜಿನ ಬಿ.ಸಿ.ಎ ಪದವಿ ಕೋರ್ಸಿಗೆ ಸರ್ಕಾರವು ಯಾವುದೇ ಅನುದಾನವನ್ನು ಮಂಜೂರು ಮಾಡುವುದಿಲ್ಲ. ಅದನ್ನು ಶಾಶ್ವತ ಅನುದಾನ ರಹಿತ ಕೋರ್ಸ್ ಎಂದು ಪರಿಗಣಿಸತಕ್ಕದ್ದು ಹಾಗೂ ಈ ಕುರಿತು ಸರ್ಕಾರ/ವಿಶ್ವವಿದ್ಯಾನಿಲಯಕ್ಕೆ ಒಪ್ಪಂದದ ಪತ್ರವನ್ನು ಸಲ್ಲಿಸತಕ್ಕದ್ದು.
3. ಮೇಲ್ಕಂಡ ಕಾಲೇಜು ವಿಶ್ವವಿದ್ಯಾನಿಲಯದ ನಿಯಮಾವಳಿಗಳ ಉಪಬಂಧಗಳನ್ನು ತಪ್ಪದೇ ಪಾಲಿಸತಕ್ಕದ್ದು.
4. ನಿಗದಿತ ವಿದ್ಯಾರ್ಥಿ ಪ್ರಮಾಣಕ್ಕಿಂತ ಹೆಚ್ಚುವರಿಯಾಗಿ ವಿದ್ಯಾರ್ಥಿಗಳ ಪ್ರವೇಶ ಮಾಡತಕ್ಕದ್ದಲ್ಲ.
5. ಜಾರಿಯಲ್ಲಿರುವ ಸರ್ಕಾರದ ನಿಯಮಾವಳಿ, ಆದೇಶಗಳು ಹಾಗೂ ವಿಶ್ವವಿದ್ಯಾನಿಲಯದ ಅನುಶಾಸನ, ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
6. ಸ್ಥಳೀಯ ವಿಚಾರಣಾ ಸಮಿತಿ ವಿಧಿಸಿರುವ ಪ್ರತಿಯೊಂದು ಷರತ್ತನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
7. ಕಾಲೇಜು/ಆಡಳಿತ ಮಂಡಳಿಯು ಶೇಕಡಾ 50ರಷ್ಟು ವಿಶ್ವವಿದ್ಯಾನಿಲಯ ಕೋಟಾವನ್ನು(ಎಲ್ಲಿ ಅನ್ವಯವಾಗುತ್ತದೆಯೋ ಅಲ್ಲಿ) ಶುಲ್ಕವನ್ನು ಮಾತ್ರ ವಸೂಲು ಮಾಡತಕ್ಕದ್ದು. ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಶುಲ್ಕ ಮೊತ್ತಕ್ಕಿಂತ ಬೇರೆ ಹೆಚ್ಚಿನ ಮೊತ್ತವನ್ನು ವಸೂಲು ಮಾಡತಕ್ಕದ್ದಲ್ಲ.
8. ದಿನಾಂಕ:13.08.1997ರಂದು ವಿಶಾಖ v/s ರಾಜಸ್ಥಾನ ಸರ್ಕಾರ ಮೊಕದ್ದಮೆಯಲ್ಲಿ ಸುಪ್ರಿಂ ಕೋರ್ಟ್ ನೀಡಿರುವ ತೀರ್ಪಿನನುಸಾರ ಯಾವುದೇ ವ್ಯಕ್ತಿ/ವಿದ್ಯಾರ್ಥಿಯು ಗಲಭೆಯನ್ನು ಉಂಟು ಮಾಡುವುದಾಗಲೀ ಅಥವಾ ಕಾಲೇಜಿನಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ ನೀಡಿದ್ದಲ್ಲಿ, ಅದು ಸಂಜ್ಞೇಯ ಅಪರಾಧ (Cognizable Offence) ಎಂದು ಪರಿಗಣಿಸಿ, ಈ ತರಹದ ಚಟುವಟಿಕೆಗಳಲ್ಲಿ ತೊಡಗಿದ ವಿದ್ಯಾರ್ಥಿ/ವ್ಯಕ್ತಿಯ ಪ್ರವೇಶವನ್ನು ರದ್ದುಪಡಿಸುವುದು; ಮತ್ತು ಆ ವ್ಯಕ್ತಿ/ವಿದ್ಯಾರ್ಥಿಯ ಮೇಲೆ ಕಾನೂನು ರಿತ್ಯಾ ಕ್ರಮ ಜರುಗಿಸತಕ್ಕದ್ದು; ಮುಂದುವರೆದು, ಕಾಲೇಜು/ಆಡಳಿತ ಮಂಡಳಿಯು ಸುಪ್ರಿಂಕೋರ್ಟಿನ ಆದೇಶದನ್ವಯ ಒಂದು ದೂರು ಸಮಿತಿಯನ್ನು ರಚಿಸಿ; ಇಂತಹ ಚಟುವಟಿಕೆಗಳನ್ನು ನಿಯಂತ್ರಿಸಲು ಕ್ರಮ ಜರುಗಿಸತಕ್ಕದ್ದು.
9. ಕಾಲೇಜು ವಿದ್ಯಾರ್ಥಿಗಳ ಬೆಳವಣಿಗೆಗಾಗಿ ಉತ್ತಮ ಕೋರ್ಸನ್ನು ನಡೆಸತಕ್ಕದ್ದು; ಕಾಲೇಜಿನ ಪ್ರಾಂಶುಪಾಲರು/ಆಡಳಿತ ಮಂಡಳಿಯು ವಿದ್ಯಾರ್ಥಿ/ಬೋಧಕ ವೃಂದವನ್ನು ಸೌಹಾರ್ದಯುತವಾಗಿ ಕಾಣತಕ್ಕದ್ದು.

10. ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯ ಅಂಕಪಟ್ಟಿ ಅಥವಾ ಇತರೆ ದಾಖಲಾತಿಗಳನ್ನು ಸದರಿ ವಿದ್ಯಾರ್ಥಿಯ ಪ್ರವೇಶವನ್ನು ವಿಶ್ವವಿದ್ಯಾನಿಲಯವು ಅನುಮೋದಿಸುವವರೆಗೆ ಅಥವಾ 06 ತಿಂಗಳ ಅವಧಿಗೆ ಮೀರಿ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅನಗತ್ಯವಾಗಿ ತಡೆಹಿಡಿಯತಕ್ಕದ್ದಲ್ಲ.
11. ಕಾಲೇಜಿನ ಆಡಳಿತ ಮಂಡಳಿಯ ಯಾವುದೇ ವಿದ್ಯಾರ್ಥಿಯು ವರ್ಗಾವಣೆ ಪ್ರಮಾಣ ಪತ್ರ ಬೇಕೆಂದು ಅಪೇಕ್ಷಿಸಿ ಅರ್ಜಿ ಸಲ್ಲಿಸಿದ್ದಲ್ಲಿ, ಅದನ್ನು ವಿತರಿಸುವಾಗ ವಿದ್ಯಾರ್ಥಿಗೆ ತೊಂದರೆ ನೀಡತಕ್ಕದ್ದಲ್ಲ; ಹಾಗೂ ಅವರಿಂದ ಬಾಕಿ ಉಳಿದಿರುವ ಶೈಕ್ಷಣಿಕ ವರ್ಷ/ಸೆಮಿಸ್ಟರ್ ಅವಧಿಗೆ ಮಾತ್ರ ಬೋಧಕ ಶುಲ್ಕವನ್ನು ಪಡೆಯತಕ್ಕದ್ದು ಹಾಗೂ ಬೇರೆ ಯಾವುದೇ ಮೊತ್ತವನ್ನು ಪಡೆಯತಕ್ಕದ್ದಲ್ಲ.
12. ಕ್ಯಾಪಿಟೇಷನ್ ಶುಲ್ಕವನ್ನು ಯಾವುದೇ ರೂಪದಲ್ಲೂ ಪಡೆಯತಕ್ಕದ್ದಲ್ಲ.
13. ಪ್ರವೇಶಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.
14. ಆಡಳಿತ ವ್ಯವಹಾರದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬಳಸತಕ್ಕದ್ದು.
15. 2025-26ನೇ ಶೈಕ್ಷಣಿಕ ಸಾಲಿಗೆ ಮುಂದುವರಿಕೆ ಸಂಯೋಜನೆಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.
16. ಕಾಲೇಜು ಪ್ರಾರಂಭವಾಗಿ 05 ವರ್ಷವಾದ ನಂತರ ಕಡ್ಡಾಯವಾಗಿ NAAC ಪ್ರಮಾಣಪತ್ರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು.
17. ಜಾರಿಯಲ್ಲಿರುವ ಅನ್ವಯವಾಗುವ ಸರ್ಕಾರದ/ವಿಶ್ವವಿದ್ಯಾನಿಲಯ/ಯು.ಜಿ.ಸಿ/ಎ.ಐ.ಸಿ.ಟಿ/ಎನ್.ಸಿ.ಟಿ.ಇ ನಿಯಾಮಾವಳಿ ಆದೇಶಗಳು ಹಾಗೂ ಪರಿನಿಯಮಾವಳಿ ಇತ್ಯಾದಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
18. ಯಾವುದೇ ಕೋರ್ಸ್‌ಗೆ/ಕೋರ್ಸ್‌ಗಳಿಗೆ ವಿಶ್ವವಿದ್ಯಾನಿಲಯದ ಪೂರ್ವಾನುಮತಿಯಿಲ್ಲದೇ ಶಾಖೆಗಳನ್ನು ಹೆಚ್ಚಿಸಬಾರದು.
19. ಪ್ರಾಂಶುಪಾಲರು, ಮೌಲ್ಯಮಾಪನ ಕಾರ್ಯಕ್ಕಾಗಿ ಅರ್ಹ ಉಪನ್ಯಾಸಕರ ಪಟ್ಟಿಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿಗಳ ಅಧ್ಯಕ್ಷರುಗಳಿಗೆ ತಪ್ಪದೇ ಸಲ್ಲಿಸತಕ್ಕದ್ದು.
20. ಸ್ಥಳೀಯ ತಪಾಸಣಾ ಸಮಿತಿಯು ವಿಧಿಸಿರುವ ಷರತ್ತುಗಳನ್ನು ಕಾರ್ಯಗತಗೊಳಿಸಿ, ಪೂರಕ ದಾಖಲೆಗಳೊಂದಿಗೆ ಅನುಪಾಲನಾ ವರದಿಯನ್ನು **ದಿನಾಂಕ:31.10.2024ರೊಳಗಾಗಿ** ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ಷರತ್ತಿಗೊಳಪಟ್ಟು 2024-25ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಮಾತ್ರ ನವೀನ ಕೋರ್ಸಿನ ಸಂಯೋಜನೆ ನೀಡಲಾಗಿದೆ.

ಆದೇಶದ ಮೇರೆಗೆ,

ಕುಲಸಚಿವರು (I/c)
**ಕುಲಸಚಿವರು,**
**ದಾವಣಗೆರೆ ವಿಶ್ವವಿದ್ಯಾನಿಲಯ**
**ಶಿವಗಂಗೋತ್ರಿ, ದಾವಣಗೆರೆ-577 002.**

ಗೆ,
1. ಅಧ್ಯಕ್ಷರು/ಕಾರ್ಯದರ್ಶಿಗಳು, ಶ್ರೀ ಬಾಪೂಜಿ ಎಜುಕೇಷನ್ ಅಸೋಸಿಯೇಷನ್, ದಾವಣಗೆರೆ-577002
2. ಪ್ರಾಂಶುಪಾಲರು, ಬಾಪೂಜಿ ಇನ್ಸಿಟಿಟ್ಯೂಟ್ ಆಫ್ ಹೈ-ಟೆಕ್ ಎಜುಕೇಷನ್ ಕಾಲೇಜು, ಲೇಕ್ ವಿವ್ಯೂ ಕ್ಯಾಂಪಸ್ ಎಸ್.ಎಸ್. ಬಡಾವಣೆ, ದಾವಣಗೆರೆ -577002

ಪ್ರತಿಗಳು:-
1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಕರ್ನಾಟಕ ಸರ್ಕಾರದ ಸಚಿವಾಲಯಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು - 560 001.
2. ಆಯುಕ್ತರು/ನಿರ್ದೇಶಕರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಸಹ್ಯಾದ್ರಿ ಕಾಲೇಜು ಆವರಣ, ಶಿವಮೊಗ್ಗ.
4. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
5. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕಛೇರಿ ಪ್ರತಿ.